**<u>ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,</u>**

**<u>ರಟ್ಟಿಹಳ್ಳಿ</u>**

**<u>ಕ್ರಿಮಿನಲ್ ಮೊಕದ್ದಮೆ ನಂಃ 202/2021</u>**

**ಸಿ.ಡಬ್ಲ್ಯೂ-10  ಪಿ.ಡಬ್ಲ್ಯೂ-8**

ಸಾಕ್ಷಿಯ ಹೆಸರು ಃಶಶಿಧರ ಯು ಜೆ

ತಂದೆಯ ಹೆಸರು ಃಃಜಯಲಿಂಗಪ್ಪ

ವಯಸ್ಸು ಃಃ60 ವರ್ಷ

ಉದ್ಯೋಗ ಃಃನಿವೃತ್ತ ಸಿಪಿಐ ಹಾವೇರಿ

ವಾಸಸ್ಥಳ ಃಹಾವೇರಿ .

ದಿನಾಂಕಃ 12-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಸಅ ರವರಿಂದಃ</u>**

ಜುಲೈ 2019 ರಿಂದ ಮೇ 2020 ರವರೆಗೆ ನಾನು ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 06.10.2019 ರಂದು ಪ್ರಕರಣದ ಕಡತವನ್ನು ಚಾಸಾ-9 ರವರಿಂದ ಪಡೆದುಕೊಂಡು ಘಟನಾ ಸ್ಥಳಕ್ಕೆ ಬೇಟಿ ನೀಡಿ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಗುನ್ನಾ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 10.45 ರಿಂದ 11.45 ರವರೆಗೆ ಗುನ್ನಾ ಪಂಚನಾಮೆಯನ್ನು ಜರುಗಿಸಿ ಆ ಕಾಲಕ್ಕೆ ಒಂದು ಛಾಯಾ ಚಿತ್ರವನ್ನು ಸೆರೆಹಿಡಿದಿರುತ್ತೇನೆ. ಅದೇ ದಿನ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಅದೇ ದಿನ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-11 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಗುನ್ಹಾ ಜಾಗೆಯ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-3(ಡಿ) ಎಂದು ಗುರುತಿಸಲಾಯಿತು.

ಆ ಕಾಲಕ್ಕೆ ಸೆರೆಹಿಡಿದ ಒಂದು ಛಾಯಾ ಚಿತ್ರವನ್ನು ಸೆರೆಹಿಡಿದಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ -5 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ 3 ನೇ ಆರೋಪಿತನ ಪರ ಶ್ರೀ. ಎಸ್ ಎನ್ ಕೆ ವಕೀಲರ ಪರವಾಗಿ ಶ್ರೀ ಎನ್ ಎಸ್ ಹೆಚ್ ವಕೀಲರಿಂದ:**

ಚಾಸಾ-2 ಮತ್ತು ಚಾಸಾ-3 ರವರನ್ನು ನಾವೇ ಕರೆದಿರುತ್ತೇವೆ. ನಾನು ದಿನಾಂಕ 06.10.2019 ರಂದು ಮೇದೂರು ಗ್ರಾಮಕ್ಕೆ ಬೇಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ -3 ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮರು ಹೇಳಿಕೆ ಹಾಗೂ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಸಿ.ಡಬ್ಲ್ಯೂ- 10 ಪಿ.ಡಬ್ಲ್ಯೂ-8**

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎನ್ ಆರ್ ಕೆ ವಕೀಲರಿಂದ:**

(ಈ ಹಂತದಲ್ಲಿ 3 ನೇ ಆರೋಪಿತನ ಪರ ಶ್ರೀ. ಎಸ್ ಎನ್ ಕೆ ವಕೀಲರು ಮಾಡಿರುವ ಪಾಟೀ ಸವಾಲನ್ನು 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎನ್ ಆರ್ ಕೆ ವಕೀಲರು ಅಳವಡಿಸಿಕೊಂಡಿರುತ್ತಾರೆ. )

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

**Sd/-**
ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ

**<u>ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,</u>**

**<u>ರಟ್ಟಿಹಳ್ಳಿ</u>**

**<u>ಕ್ರಿಮಿನಲ್ ಮೊಕದ್ದಮೆ ನಂಃ 202/2021</u>**

**ಸಿ.ಡಬ್ಲ್ಯೂ-9 ಪಿ.ಡಬ್ಲ್ಯೂ-7**

ಸಾಕ್ಷಿಯ ಹೆಸರು ಃಬಸವರಾಜ ಹರವಿ

ತಂದೆಯ ಹೆಸರು ಃಃಬಸಪ್ಪ

ವಯಸ್ಸು ಃಃ57 ವರ್ಷ

ಉದ್ಯೋಗ ಃಃಎ ಎಸ್ ಐ , ಕುಮಾರಪಟ್ಟಣ ವೃತ್ತ ಕಚೇರಿ , ಕುಮಾರಪಟ್ಟಣ

ವಾಸಸ್ಥಳ ಃರಾಣೇಬೆನ್ನೂರು .

ದಿನಾಂಕಃ 12-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಸಅ ರವರಿಂದಃ</u>**

ಆಗಸ್ಟ 2013 ರಿಂದ ಜುಲೈ 2021ರವರೆಗೆ ನಾನು ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 05.10.2019 ರಂದು ರಾತ್ರಿ 21.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ಪಿರ್ಯಾದಿಯನ್ನು ನೀಡಿರುತ್ತಾರೆ ಅದನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನಾ ಸಂಖ್ಯೆ 89/2019 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ತಯಾರಿಸಿ ಪಿಸಿ-1192 ರವರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಮರು ದಿನ ದಿನಾಂಕ

06.10.2019 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-10 ರವರಿಗೆ ವಹಿಸಿರುತ್ತೇನೆ.

ಪಿರ್ಯಾದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1(ಬಿ) ಎಂದು ಗುರುತಿಸಲಾಯಿತು.

ಪ್ರ.ವ.ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 3 ನೇ ಆರೋಪಿತನ ಪರ ಶ್ರೀ. ಎಸ್ ಎನ್ ಕೆ ವಕೀಲರಿಂದ:**

ಪಿರ್ಯಾದಿದಾರ ದಸ್ತೂರು ಪಿರ್ಯಾದಿಯನ್ನು ತಂದು ಠಾಣೆಗೆ ಹಾಜರುಪಡಿಸಿರುತ್ತಾರೆ. ನಿ ಪಿ -1 ಪಿರ್ಯಾದಿಗೆ ಚಾಸಾ-7 ರವರು ದಸ್ತೂರು ಹಾಕಿರುತ್ತಾರೆ. ನಿ ಪಿ -1 ನ್ನು ನನ್ನ ಸಮಕ್ಷಮ ಬರೆದಿರುವುದಿಲ್ಲ ಎಂದರೆ ಸರಿ. ನಾನು ಗುನ್ನಾ ದಾಖಲಿಸಿ ಮುಂದಿನ ತನಿಖೆಯನ್ನು ಚಾಸಾ-10 ರವರಿಗೆ ವಹಿಸಿರುತ್ತೇನೆ. ನಾನು ಪಿರ್ಯಾದಿದಾರರಿಗೆ ಸಹಾಯ ಮಾಡಲು ಸುಳ್ಳು ಗುನ್ನೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎನ್ ಆರ್ ಕೆ ವಕೀಲರಿಂದ:**

(ಈ ಹಂತದಲ್ಲಿ 3 ನೇ ಆರೋಪಿತನ ಪರ ಶ್ರೀ. ಎಸ್ ಎನ್ ಕೆ ವಕೀಲರು ಮಾಡಿರುವ ಪಾಟೀ ಸವಾಲನ್ನು 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎನ್ ಆರ್ ಕೆ ವಕೀಲರು ಅಳವಡಿಸಿಕೊಂಡಿರುತ್ತಾರೆ. )

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

**Sd/-**
ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,**

**ರಟ್ಟಿಹಳ್ಳಿ**

**ಕ್ರಿಮಿನಲ್ ಮೊಕದ್ದಮೆ ನಂಃ 202/2021**

**ಸಿ.ಡಬ್ಲ್ಯೂ-6 ಪಿ.ಡಬ್ಲ್ಯೂ-6**

ಸಾಕ್ಷಿಯ ಹೆಸರು ಃಹನುಮಂತಪ್ಪ ಬಾಲಪ್ಪನವರ

ತಂದೆಯ ಹೆಸರು ಃಃಬಸಪ್ಪ

ವಯಸ್ಸು ಃಃ40 ವರ್ಷ

ಉದ್ಯೋಗ ಃವ್ಯವಸಾಯ

ವಾಸಸ್ಥಳ ಃಪಾಃ ಮೇದೂರು

ದಿನಾಂಕಃ 12-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಚಾಸಾ-1,4,5 ಮತ್ತು 7 ರವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರ ಪರಿಚಯವಿದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಘಟನೆಯನ್ನು ನೋಡಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದಃ

ಸಿ.ಡಬ್ಲ್ಯೂ-6 ಪಿ.ಡಬ್ಲ್ಯೂ-6

ಮೃತ ಮರ್ದನ್ ಸಾಬ್ ರವರಿಗೆ 5 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರೆಲ್ಲರೂ ಬೇರೆ ಬೇರೆಯಾಗಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 04.10.2019 ರಂದು ಮುಂಜಾನೆ 11.00 ಗಂಟೆಗೆ ನಾನು ಚಾಸಾ-4 ರವರ ಹಿಟ್ಟಿನ ಗಿರಣಿಗೆ ಹಿಟ್ಟು ಹಾಕಿಸಲು ಬಂದಾಗ ಚಾಸಾ-4 ರವರ ಗಿರಣಿಯ ಮುಂದೆ ಗಲಾಟೆ ಆಗುತ್ತಿತ್ತು ಆಗ ನಾನು ಸಹ ನೋಡಲಾಗಿ ಚಾಸಾ-4 ರವರು ಹಿಟ್ಟಿನ ಗಿರಿಣಿಯಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರೆಲ್ಲರೂ ಕೂಡಿಕೊಂಡು ಬಂದು ಚಾಸಾ-4 ರವರ ಕಡೆಯ ಗೋವಿನ ಜೋಳದ ಹಲರ್ ಗಳನ್ನು ಹಾಗೂ ಗಿರಣಿ ಮನೆಯನ್ನು ನಮಗೆ ಕೊಡು ಅಂತಾ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ವಿಷಯ ತಿಳಿದು ಚಾಸಾ-1 ರವರು ಅಲ್ಲಿಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-4 ಮತ್ತು ಚಾಸಾ-1 ರವರು ಆರೋಪಿತರ ಮಾತನ್ನು ಕೇಳದೇ ಇದ್ದಾಗ ಆರೋಪಿತರೆಲ್ಲರೂ ಅವರ ಜೊತೆ ತಂಟೆ ತೆಗೆದು ಅವಾಚ್ಯ ಶಬ್ದಗಳಿಂದ ಬೈದು 3 ನೇ ಆರೋಪಿ ಚಾಸಾ-4 ರವರನ್ನು ಹಿಡಿದುಕೊಂಡು 1 ಮತ್ತು 2 ನೇ ಆರೋಪಿತರು ಕೈಯಿಂದ ಚಾಸಾ-4 ರವರ ಮೈಕೈಗೆ ಮುಖಕ್ಕೆ ಹೊಡಿ ಬಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿತರು ಕೈಯಿಂದ ಚಾಸಾ-4 ರವರ ಕಪಾಳಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ಜಗಳ ಬಿಡಿಸಲು ಬಂದ ಚಾಸಾ-1 ರವರನ್ನು ಆರೋಪಿತರೆಲ್ಲರೂ ಕೂಡಿಕೊಂಡು ಅವಳನ್ನು ಎಳೆದಾಡುತ್ತಾ ತಲೆಯ ಕೂದಲನ್ನು ಹಿಡಿದು ಎಳೆದಾಡಿ ಅವಳ

ಮೈ ಮೇಲಿನ ಬಟ್ಟೆ ಜಗ್ಗಾಡಿ ಕೈಯಿಂದ ಹೊಡಿ ಬಡಿ ಮಾಡಿ ಸಾರ್ವಜನಿಕವಾಗಿ ಅವಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹೋಗುವಾಗ ಚಾಸಾ-1 ಮತ್ತು ಚಾಸಾ-4 ರವರಿಗೆ ಹಿಸ್ಸೆ ಕೊಡುವುದಿಲ್ಲ ನಿಮ್ಮ ಪ್ರಾಣ ತೆಗೆಯುತ್ತೇವೆ ಅಂತಾ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಘಟನೆಯಲ್ಲಿ ಪೆಟ್ಟಾಗಿದ್ದರಿಂದ ಚಾಸಾ-4 ರವರು ರಟ್ಟಿಹಳ್ಳಿ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಉಪಚಾರ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ-1 ರವರು ದೂರು ಸಲ್ಲಿಸಿರುತ್ತಾರೆ ಎಂದು ಕೇಳಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ ಪಿ -8 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎನ್ ಆರ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ 3 ನೇ ಆರೋಪಿತರ ಪರ ಶ್ರೀ. ಎಸ್ ಎನ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)
ಓ ಹೇ ಕೆ ಸರಿ ಇದೆ.

Sd/-
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ , ರಟ್ಟಿಹಳ್ಳಿ**

**ಕ್ರಿಮಿನಲ್ ಮೊಕದ್ದಮೆ ನಂ: 202/2021**

**ಸಿ.ಡಬ್ಲ್ಯೂ-5 ಪಿ.ಡಬ್ಲ್ಯೂ-5**

ಸಾಕ್ಷಿಯ ಹೆಸರು ಃ ಪ್ರಕಾಶ ಕೋಣನತಲೆ

ತಂದೆಯ ಹೆಸರು ಃ ಕರಿಯಪ್ಪ

ವಯಸ್ಸು ಃ 40 ವರ್ಷ

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಪಾಃ ಮೇದೂರು

ದಿನಾಂಕಃ 12-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಚಾಸಾ-1,4,6 ಮತ್ತು 7 ರವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರ ಪರಿಚಯವಿದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಘಟನೆಯನ್ನು ನೋಡಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದಃ

**ಸಿ.ಡಬ್ಲ್ಯೂ-5 ಪಿ.ಡಬ್ಲ್ಯೂ-5**

ಮೃತ ಮರ್ದನ್ ಸಾಬ್ ರವರಿಗೆ 5 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರೆಲ್ಲರೂ ಬೇರೆ ಬೇರೆಯಾಗಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 04.10.2019 ರಂದು ಮುಂಜಾನೆ 11.00 ಗಂಟೆಗೆ ನಾನು ನಮ್ಮ ಊರ ಬಸ್ಟಾಂಡ್ ಕಡೆಯಿಂದ ನಡೆದುಕೊಂಡು ಬಂದು ಚಾಸಾ-4 ರವರ ಹಿಟ್ಟಿನ ಗಿರಣಿಯ ಮುಂದಿನ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಚಾಸಾ-4 ರವರ ಗಿರಣಿಯ ಮುಂದೆ ಗಲಾಟೆ ಆಗುತ್ತಿತ್ತು ಆಗ ನಾನು ಸಹ ನೋಡಲಾಗಿ ಚಾಸಾ-4 ರವರು ಹಿಟ್ಟಿನ ಗಿರಿಣಿಯಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರೆಲ್ಲರೂ ಕೂಡಿಕೊಂಡು ಬಂದು ಚಾಸಾ-4 ರವರ ಕಡೆಯ ಗೋವಿನ ಜೋಳದ ಹಲರ್ ಗಳನ್ನು ಹಾಗೂ ಗಿರಣಿ ಮನೆಯನ್ನು ನಮಗೆ ಕೊಡು ಅಂತಾ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ವಿಷಯ ತಿಳಿದು ಚಾಸಾ-1 ರವರು ಅಲ್ಲಿಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-4 ಮತ್ತು ಚಾಸಾ-1 ರವರು ಆರೋಪಿತರ ಮಾತನ್ನು ಕೇಳದೇ ಇದ್ದಾಗ ಆರೋಪಿತರೆಲ್ಲರೂ ಅವರ ಜೊತೆ ತಂಟೆ ತೆಗೆದು ಅವಾಚ್ಯ ಶಬ್ದಗಳಿಂದ ಬೈದು 3 ನೇ ಆರೋಪಿ ಚಾಸಾ-4 ರವರನ್ನು ಹಿಡಿದುಕೊಂಡು 1 ಮತ್ತು 2 ನೇ ಆರೋಪಿತರು ಕೈಯಿಂದ ಚಾಸಾ-4 ರವರ ಮೈಕೈಗೆ ಮುಖಕ್ಕೆ ಹೊಡಿ ಬಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿತರು ಕೈಯಿಂದ ಚಾಸಾ-4 ರವರ ಕಪಾಳಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ಜಗಳ ಬಿಡಿಸಲು ಬಂದ ಚಾಸಾ-1 ರವರನ್ನು ಆರೋಪಿತರೆಲ್ಲರೂ ಕೂಡಿಕೊಂಡು ಅವಳನ್ನು ಎಳೆದಾಡುತ್ತಾ ತಲೆಯ ಕೂದಲನ್ನು ಹಿಡಿದು ಎಳೆದಾಡಿ ಅವಳ

**ಸಿ.ಡಬ್ಲ್ಯೂ-5 ಪಿ.ಡಬ್ಲ್ಯೂ-5**

ಮೈ ಮೇಲಿನ ಬಟ್ಟೆ ಜಗ್ಗಾಡಿ ಕೈಯಿಂದ ಹೊಡಿ ಬಡಿ ಮಾಡಿ ಸಾರ್ವಜನಿಕವಾಗಿ ಅವಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹೋಗುವಾಗ ಚಾಸಾ-1 ಮತ್ತು ಚಾಸಾ-4 ರವರಿಗೆ ಹಿಸ್ಸೆ ಕೊಡುವುದಿಲ್ಲ ನಿಮ್ಮ ಪ್ರಾಣ ತೆಗೆಯುತ್ತೇವೆ ಅಂತಾ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಘಟನೆಯಲ್ಲಿ ಪೆಟ್ಟಾಗಿದ್ದರಿಂದ ಚಾಸಾ-4 ರವರು ರಟ್ಟಿಹಳ್ಳಿ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಉಪಚಾರ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ-1 ರವರು ದೂರು ಸಲ್ಲಿಸಿರುತ್ತಾರೆ ಎಂದು ಕೇಳಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ ಪಿ -7 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎನ್ ಆರ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ 3 ನೇ ಆರೋಪಿತರ ಪರ ಶ್ರೀ. ಎಸ್ ಎನ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)
ಓ ಹೇ ಕೆ ಸರಿ ಇದೆ.

Sd/-
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ

**<u>ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,</u>**

**<u>ರಟ್ಟಿಹಳ್ಳಿ</u>**

**<u>ಕ್ರಿಮಿನಲ್ ಮೊಕದ್ದಮೆ ನಂಃ 202/2021</u>**

**ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-4**

ಸಾಕ್ಷಿಯ ಹೆಸರು ಃಅಹಮ್ಮದ್ ಹುಬ್ಬಳ್ಳಿ

ತಂದೆಯ ಹೆಸರು ಃಮರ್ದಾನ್ ಸಾಬ್

ವಯಸ್ಸು ಃ45 ವರ್ಷ

ಉದ್ಯೋಗ ಃಕೂಲಿ ಕೆಲಸ

ವಾಸಸ್ಥಳ ಃಪಾಃ ಕೋಡಮಗ್ಗಿ , ಹಾಲಿವಸ್ತಿ ಮೇದೂರು

ದಿನಾಂಕಃ 12-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಸಅ ರವರಿಂದಃ</u>**

ಚಾಸಾ-1 ನನ್ನ ಹೆಂಡತಿ. ಚಾಸಾ-5 ರಿಂದ 7 ರವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರು ನನ್ನ ಅಣ್ಣ ತಮ್ಮಂದಿರು ಇರುತ್ತಾರೆ. ಮೃತ 4 ಮತ್ತು 5 ನೇ ಆರೋಪಿ ನನ್ನ ತಂದೆ ತಾಯಿ ಇರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನನಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ನಾನು ಘಟನೆಯನ್ನು ನೋಡಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-4**

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದಃ

ನನ್ನ ತಂದೆ ಮೃತ ಮರ್ದನ್ ಸಾಬ್ ರವರಿಗೆ ನಾವು 5 ಜನ ಮಕ್ಕಳು ಇರುತ್ತೇವೆ ಎಂದರೆ ಸರಿ. ನಾವು ಎಲ್ಲರೂ ಬೇರೆ ಬೇರೆಯಾಗಿ ವಾಸವಾಗಿರುತ್ತೇವೆ ಎಂದರೆ ಸರಿ. ನಾನು ಆಸ್ತಿ ಹಂಚುವ ಕಾಲಕ್ಕೆ ನನಗೆ ಸಮಾನವಾಗಿ ಆಸ್ತಿ ಹಂಚಿಲ್ಲ ಅಂತಾ ಕೇಳಿದ್ದರಿಂದ ಆರೋಪಿತರು ಎಲ್ಲರೂ ಕೂಡಿ ವಿನಾಃ ಕಾರಣ ನನ್ನ ಜೊತೆ ಜಗಳ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 04.10.2019 ರಂದು ಮುಂಜಾನೆ 11.00 ಗಂಟೆಗೆ ನಾನು ನನ್ನ ಹಿಟ್ಟಿನ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರೆಲ್ಲರೂ ಕೂಡಿಕೊಂಡು ಬಂದು ನನಗೆ ಕಡೆಯ ಗೋವಿನ ಜೋಳದ ಹಲರ್ ಗಳನ್ನು ಹಾಗೂ ಗಿರಣಿ ಮನೆಯನ್ನು ನಮಗೆ ಕೊಡು ಅಂತಾ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ವಿಷಯ ತಿಳಿದು ನನ್ನ ಹೆಂಡತಿ ಚಾಸಾ-1 ರವರು ಅಲ್ಲಿಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಚಾಸಾ-1 ರವರು ಆರೋಪಿತರ ಮಾತನ್ನು ಕೇಳದೇ ಇದ್ದಾಗ ಆರೋಪಿತರೆಲ್ಲರೂ ನಮ್ಮ ಜೊತೆ ತಂಟೆ ತೆಗೆದು ಅವಾಚ್ಯ ಶಬ್ದಗಳಿಂದ ಬೈದು 3 ನೇ ಆರೋಪಿ ನನನ್ನು ಹಿಡಿದುಕೊಂಡು 1 ಮತ್ತು 2 ನೇ ಆರೋಪಿತರು ಕೈಯಿಂದ ನನಗೆ ಮೈಕೈಗೆ ಮುಖಕ್ಕೆ

ಹೊಡಿ ಬಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿತರು ಕೈಯಿಂದ ನನ್ನ ಕಪಾಳಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ಜಗಳ ಬಿಡಿಸಲು ಬಂದ ನನ್ನ ಹೆಂಡತಿ ಚಾಸಾ-1 ರವರನ್ನು ಆರೋಪಿತರೆಲ್ಲರೂ ಕೂಡಿಕೊಂಡು ಅವಳನ್ನು ಎಳೆದಾಡುತ್ತಾ ತಲೆಯ ಕೂದಲನ್ನು ಹಿಡಿದು ಎಳೆದಾಡಿ ಅವಳ ಮೈ ಮೇಲಿನ ಬಟ್ಟೆ ಜಗ್ಗಾಡಿ ಕೈಯಿಂದ ಹೊಡಿ ಬಡಿ ಮಾಡಿ ಸಾರ್ವಜನಿಕವಾಗಿ ಅವಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಿಮಗೆ ಹಿಸ್ಸೆ ಕೊಡುವುದಿಲ್ಲ ನಿಮ್ಮ ಪ್ರಾಣ ತೆಗೆಯುತ್ತೇನೆ ಅಂತಾ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಘಟನೆಯಲ್ಲಿ ಪೆಟ್ಟಾಗಿದ್ದರಿಂದ ನಾನು ರಟ್ಟಿಹಳ್ಳಿ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಉಪಚಾರ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನನ್ನ ಹೆಂಡತಿ ಚಾಸಾ-1 ರವರು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ ಪಿ -6 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿತರು ನನ್ನ ಸಹೋದರರು ಹಾಗೂ ಸಂಬಂಧಿಕರು ಇರುವುದರಿಂದ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎನ್ ಆರ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ 3 ನೇ ಆರೋಪಿತರ ಪರ ಶ್ರೀ. ಎಸ್ ಎನ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)
ಓ ಹೇ ಕೆ ಸರಿ ಇದೆ.

Sd/-
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ಸಂಚಾರಿ ನ್ಯಾಯಾಲಯ, ರಟ್ಟೆಹಳ್ಳಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ , ರಟ್ಟಿಹಳ್ಳಿ**

**ಕ್ರಿಮಿನಲ್ ಮೊಕದ್ದಮೆ ನಂಃ 202/2021**

**ಸಿ.ಡಬ್ಲ್ಯೂ-3 ಪಿ.ಡಬ್ಲ್ಯೂ-3**

ಸಾಕ್ಷಿಯ ಹೆಸರು ಃಮಹೇಶ ತಿಪ್ಪಣ್ಣನವರ

ತಂದೆಯ ಹೆಸರು ಃಃಆನಂದಪ್ಪ

ವಯಸ್ಸು ಃಃ43 ವರ್ಷ

ಉದ್ಯೋಗ ಃವ್ಯವಸಾಯ

ವಾಸಸ್ಥಳ ಃಃಮೇದೂರು

ದಿನಾಂಕಃ 12-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಸುಮಾರು 4 ವರ್ಷಗಳ ಹಿಂದೆ ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಒಂದು ದಾಖಲೆ ಮೇಲೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

ಪೋಲಿಸರು ಒಂದು ಛಾಯಾ ಚಿತ್ರವನ್ನು ಸೆರೆಹಿಡಿದಿರುತ್ತಾರೆ. ಏತಕ್ಕಾಗಿ ಸೆರೆಹಿಡಿದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಸಿ.ಡಬ್ಲ್ಯೂ-3 ಪಿ.ಡಬ್ಲ್ಯೂ-3**

ಗುನ್ಹಾ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

ಗುನ್ಹಾ ಸ್ಥಳದ ಪಂಚನಾಮೆಯ ಕಾಲಕ್ಕೆ ಸೆರೆಹಿಡಿದ ಛಾಯಾಚಿತ್ರ ಹಾಗು ಛಾಯಾಚಿತ್ರದಲ್ಲಿ ತನ್ನ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ** ಮಾನ್ಯ ಸ.ಸ.ಅ ರವರಿಂದಃ

ದಿನಾಂಕ 06.10.2019 ರಂದು ಚಾಸಾ-10 ರವರು ಗುನ್ಹಾ ಸ್ಥಳಕ್ಕೆ ಬಂದು ಚಾಸಾ-1 ರವರು ತೋರಿಸಿದ ಗುನ್ಹಾ ಸ್ಥಳದ ಪಂಚನಾಮೆಯನ್ನು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಮುಂಜಾನೆ 10.45 ರಿಂದ 11.45 ರವರೆಗೆ ನಿ ಪಿ -3 ರಂತೆ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿಪಿ -5 ರಂತೆ ಒಂದು ಛಾಯಾಚಿತ್ರವನ್ನು ಸೆರೆಹಿಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರೂ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಸಿ.ಡಬ್ಲ್ಯೂ-3 ಪಿ.ಡಬ್ಲ್ಯೂ-3**

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎನ್ ಆರ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ 3 ನೇ ಆರೋಪಿತರ ಪರ ಶ್ರೀ. ಎಸ್ ಎನ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

Sd/-
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,**

**ರಟ್ಟಿಹಳ್ಳಿ**

**ಕ್ರಿಮಿನಲ್ ಮೊಕದ್ದಮೆ ನಂಃ 202/2021**

**ಸಿ.ಡಬ್ಲ್ಯೂ-2 ಪಿ.ಡಬ್ಲ್ಯೂ-2**

ಸಾಕ್ಷಿಯ ಹೆಸರು ಃನಜೀರ್ ಅಹಮ್ಮದ್ ಸಾಬ್

ತಂದೆಯ ಹೆಸರು ಃಚಮನ್ ಸಾಬ್

ವಯಸ್ಸು ಃ72 ವರ್ಷ

ಉದ್ಯೋಗ ಃವ್ಯವಸಾಯ

ವಾಸಸ್ಥಳ ಃಮೇದೂರು

ದಿನಾಂಕಃ 12-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಸುಮಾರು 4 ವರ್ಷಗಳ ಹಿಂದೆ ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಒಂದು ದಾಖಲೆ ಮೇಲೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

ಪೋಲಿಸರು ಒಂದು ಛಾಯಾ ಚಿತ್ರವನ್ನು ಸೆರೆಹಿಡಿದಿರುತ್ತಾರೆ. ಏತಕ್ಕಾಗಿ ಸೆರೆಹಿಡಿದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಸಿ.ಡಬ್ಲ್ಯೂ-2 ಪಿ.ಡಬ್ಲ್ಯೂ-2**

ಗುನ್ಹಾ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ಗುನ್ಹಾ ಸ್ಥಳದ ಪಂಚನಾಮೆಯ ಕಾಲಕ್ಕೆ ಸೆರೆಹಿಡಿದ ಛಾಯಾಚಿತ್ರ ಹಾಗು ಛಾಯಾಚಿತ್ರದಲ್ಲಿ ತನ್ನ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ** ಮಾನ್ಯ ಸ.ಸ.ಅ ರವರಿಂದಃ

ದಿನಾಂಕ 06.10.2019 ರಂದು ಚಾಸಾ-10 ರವರು ಗುನ್ಹಾ ಸ್ಥಳಕ್ಕೆ ಬಂದು ಚಾಸಾ-1 ರವರು ತೋರಿಸಿದ ಗುನ್ಹಾ ಸ್ಥಳದ ಪಂಚನಾಮೆಯನ್ನು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಮುಂಜಾನೆ 10.45 ರಿಂದ 11.45 ರವರೆಗೆ ನಿ ಪಿ -3 ರಂತೆ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿಪಿ -5 ರಂತೆ ಒಂದು ಛಾಯಾಚಿತ್ರವನ್ನು ಸೆರೆಹಿಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರೂ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಸಿ.ಡಬ್ಲ್ಯೂ-2 ಪಿ.ಡಬ್ಲ್ಯೂ-2**

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಎನ್ ಆರ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ 3 ನೇ ಆರೋಪಿತರ ಪರ ಶ್ರೀ. ಎಸ್ ಎನ್ ಕೆ ವಕೀಲರಿಂದ:**
**ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

Sd/-
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ